## ಕರ್ನಾಟಕ ಸರ್ಕಾರ

# ಅಭಿವೃದ್ಧಿ ಕಾರ್ಯಕ್ರಮಗಳ ಮೇಲೆ ತ್ವರಿತ ಮಾದರಿ ಸಮೀಕ್ಷೆ – 2015–16

**ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ,**
**ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ,**
**ಬಹುಮಹಡಿ ಕಟ್ಟಡ, ಬೆಂಗಳೂರು – 560 001**

ಸನ್ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ, ಇವರ ಸೂಚನೆಯ ಅನುಸಾರ ಕಳೆದ ಮೂರು ವರ್ಷಗಳಲ್ಲಿ ಅನುಷ್ಠಾನಗೊಂಡ ಮಹತ್ವಾಕಾಂಕ್ಷೆಯ ಯೋಜನೆಗಳ ಮೇಲೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಕೈಗೊಂಡ ತ್ವರಿತ ಮಾದರಿ ಸಮೀಕ್ಷೆ.

**1. ಕ್ಷೀರ ಬಾಗ್ಯ :**

- ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

**2. ಅನ್ನ ಭಾಗ್ಯ:**

- ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ:

**3. ರಿಯಾಯಿತಿ ಬಡ್ಡಿ ದರ:**

- ಸಹಕಾರ ಇಲಾಖೆ:

**4. ಕೃಷಿ ಬಾಗ್ಯ :**

- ಕೃಷಿ ಇಲಾಖೆ

# ಕ್ಷೀರಭಾಗ್ಯ

[ಉಲ್ಲೇಖಿತ ವರ್ಷ 2015–16]



ಕ್ಷೀರಭಾಗ್ಯ– ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವುಗಳ ಸಹಯೋಗದೊಂದಿಗೆ ಶಾಲೆ ಮತ್ತು ಅಂಗನವಾಡಿಗಳ ಮಕ್ಕಳಿಗೆ ವಾರದಲ್ಲಿ ಮೂರು ದಿನಗಳು ಹಾಲನ್ನು ನೀಡುವ ಯೋಜನೆಯು ದಿನಾಂಕ: 01.08.2013 ರಿಂದ ಜಾರಿಯಲ್ಲಿ ಬಂದಿದೆ. ಶುದ್ಧ ಹಾಲಿನ ಪುಡಿಯನ್ನು ಶಾಲೆಗಳಿಗೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಕರ್ನಾಟಕ ಹಾಲು ಮಹಾಮಂಡಳಿ, ಜಿಲ್ಲಾ ಹಾಲು ಒಕ್ಕೂಟಗಳ ಮೂಲಕ ಸರಬರಾಜು ಮಾಡಲಾಗುತ್ತದೆ. ಹಾಲನ್ನು ತಯಾರಿಸಿ ವಾರದಲ್ಲಿ ಮೂರು ದಿನ ಶಾಲಾ ಮತ್ತು ಅಂಗನವಾಡಿ ಮಕ್ಕಳಿಗೆ ಪೌಷ್ಟಿಕತೆಯನ್ನು ವೃದ್ಧಿಸುವ ಸಲುವಾಗಿ ನೀಡಲಾಗುತ್ತಿದೆ.

ಅಂಗನವಾಡಿ ಕೇಂದ್ರಕ್ಕೆ ಬರುವ 3 ವರ್ಷದಿಂದ 6 ವರ್ಷದ ಮಕ್ಕಳಿಗೆ ವಾರದಲ್ಲಿ 3 ದಿನಗಳು ದಿನಬಿಟ್ಟು ದಿನದಂತೆ 15 ಗ್ರಾಂ ಕೆನೆ ರಹಿತ ಹಾಲಿನ ಪುಡಿಯಿಂದ ಬೆಳಗ್ಗೆ 10 ಗಂಟೆಗೆ 150 ಎಂಎಲ್ ಹಾಲನ್ನು ತಯಾರಿಸಿ ನೀಡಲಾಗುತ್ತದೆ. ಸರ್ಕಾರಿ ಶಾಲೆ ಹಾಗೂ ಅನುದಾನಿತ ಶಾಲೆಗಳಲ್ಲಿಯೂ ಸಹ ಒಂದರಿಂದ ಹತ್ತನೆ ತರಗತಿಯವರೆವಿಗೂ ಓದುತ್ತಿರುವ ಮಕ್ಕಳಿಗೆ ವಾರದಲ್ಲಿ ಮೂರು ದಿನಗಳು ನಂದಿನಿ ಕೆನೆ ಭರಿತ ಹಾಲಿನ ಪುಡಿಯಿಂದ ತಯಾರಿಸಿದ 150 ಎಂಎಲ್ ಹಾಲನ್ನು ನೀಡಲಾಗುತ್ತದೆ.

ರಾಜ್ಯದ ಎಲ್ಲಾ 748 ಹೋಬಳಿಗಳಲ್ಲಿ ಪ್ರತಿ ಹೋಬಳಿಗೆ ಒಂದು ಅಂಗನವಾಡಿ ಮತ್ತು ಒಂದು ಪ್ರಾಥಮಿಕ ಶಾಲೆಯಂತೆ 748 ಅಂಗನಾಡಿ ಕೇಂದ್ರಗಳು ಮತ್ತು 748 ಪ್ರಾಥಮಿಕ ಶಾಲೆಗಳಿಂದ ಕ್ಷೇತ್ರ ಕಾರ್ಯಾಚರಣೆ ನಡೆಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

- ಆಯ್ಕೆ ಮಾಡಿದ 748 ಅಂಗನವಾಡಿ ಕೇಂದ್ರಗಳಲ್ಲಿ ಇರುವ ಒಟ್ಟು ಮಕ್ಕಳ ಸಂಖ್ಯೆ → 21,614
- ಆಯ್ಕೆ ಮಾಡಿದ 748 ಪ್ರಾಥಮಿಕ ಶಾಲೆಗಳಲ್ಲಿ ಇರುವ ಒಟ್ಟು ಮಕ್ಕಳ ಸಂಖ್ಯೆ → 1,08,645
- ಸಮೀಕ್ಷಿಸಿದ ಪ್ರಾಥಮಿಕ ಶಾಲಾ ಮಕ್ಕಳ ಸಂಖ್ಯೆ → 3740 (ಪ್ರತಿ ಪ್ರಾಥಮಿಕ ಶಾಲೆಗೆ 5 ಮಕ್ಕಳಂತೆ)
- ಸಮೀಕ್ಷಿಸಿದ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ → 748 (ಇವರ ಮೂಲಕ ಪ್ರತಿ ಅಂಗನವಾಡಿ ಕೇಂದ್ರಕ್ಕೆ 5 ಮಕ್ಕಳಂತೆ ಒಟ್ಟು 3740 ಮಕ್ಕಳ ಮಾಹಿತಿ ಸಂಗ್ರಹಿಸಲಾಗಿದೆ).

**ಪ್ರಮುಖ ಅಂಶಗಳು:–**

- ನಿಗದಿತ ಸಮಯಕ್ಕೆ ಹಾಲಿನ ಪುಡಿ ಸರಬರಾಜು ಆಗುತ್ತಿರುವುದು
  - **98%** ಅಂಗನವಾಡಿ ಕೇಂದ್ರಗಳಲ್ಲಿ (748 ಅಂಗನವಾಡಿ ಕೇಂದ್ರಗಳ ಪೈಕಿ 736ರಲ್ಲಿ)
  - **98%** ಪ್ರಾಥಮಿಕ ಶಾಲೆಗಳಲ್ಲಿ (748 ಶಾಲೆಗಳ ಪೈಕಿ 731ರಲ್ಲಿ)
- ವಾರದ ಎಲ್ಲಾ ಮೂರು ದಿನಗಳಲ್ಲೂ ಹಾಲನ್ನು ನೀಡುತ್ತಿರುವುದು
  - **99%** ಅಂಗನವಾಡಿ ಕೇಂದ್ರಗಳಲ್ಲಿ (748 ಅಂಗನವಾಡಿ ಕೇಂದ್ರಗಳ ಪೈಕಿ 743ರಲ್ಲಿ)
  - **100%** ಪ್ರಾಥಮಿಕ ಶಾಲೆಗಳಲ್ಲಿ (ಎಲ್ಲಾ 748 ಶಾಲೆಗಳಲ್ಲಿ)
- ನಿಗದಿ ಪಡಿಸಿರುವಂತೆ 150 ಎಂಎಲ್ ಹಾಲನ್ನು ನೀಡುತ್ತಿರುವುದು
  - **99%** ಅಂಗನವಾಡಿ ಕೇಂದ್ರಗಳಲ್ಲಿ (748 ಅಂಗನವಾಡಿ ಕೇಂದ್ರಗಳ ಪೈಕಿ 747ರಲ್ಲಿ)
  - **100%** ಪ್ರಾಥಮಿಕ ಶಾಲೆಗಳಲ್ಲಿ (ಎಲ್ಲಾ 748 ಶಾಲೆಗಳಲ್ಲಿ)
- ಪ್ರಾಥಮಿಕ ಶಾಲೆಗಳಲ್ಲಿ ನೀಡುತ್ತಿರುವ ಹಾಲಿನ ಪ್ರಮಾಣ ಸಾಕಾಗುತ್ತಿಲ್ಲವೆಂದು ತಿಳಿಸಿರುವ ಮಕ್ಕಳ ಪ್ರಮಾಣ
  - **4%** ರಷ್ಟು (3740 ಮಕ್ಕಳ ಪೈಕಿ 135)
- ಪ್ರಾಥಮಿಕ ಶಾಲೆಗಳಲ್ಲಿ ಹಾಲನ್ನು ಕುಡಿಯದಿರುವುದಕ್ಕೆ ಸಮೀಕ್ಷಿಸಿದ 642 ಮಕ್ಕಳು ನೀಡಿದ ಕಾರಣ
  - ಕೆಟ್ಟ ವಾಸನೆ **27%** (642 ರಲ್ಲಿ 174 ಮಕ್ಕಳು)
  - ಕಳಪೆ ಗುಣಮಟ್ಟ **15%** (642 ರಲ್ಲಿ 95 ಮಕ್ಕಳು)
  - ಸಮರ್ಪಕವಾಗಿ ತಯಾರಿಸಿಲ್ಲ **9%** (642 ರಲ್ಲಿ 55 ಮಕ್ಕಳು)
  - ಇತರೆ ಕಾರಣಗಳು **49%** (642 ರಲ್ಲಿ 318 ಮಕ್ಕಳು)

# ಅನ್ನಭಾಗ್ಯ

**[ಉಲ್ಲೇಖಿತ ವರ್ಷ–2015–16]**

ಅನ್ನಭಾಗ್ಯ ಯೋಜನೆಯನ್ನು 2013–14 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಕರ್ನಾಟಕ ರಾಜ್ಯವನ್ನು ಹಸಿವು ಮುಕ್ತ ರಾಜ್ಯವನ್ನಾಗಿಸುವ ನಿಟ್ಟಿನಲ್ಲಿ ಸರ್ಕಾರವು 2015–16ನೇ ಸಾಲಿನಿಂದ ಅಂತ್ಯೋದಯ ಕುಟುಂಬಗಳಿಗೆ 35 ಕೆ.ಜಿ ಆಹಾರ ಧಾನ್ಯ ಉಚಿತವಾಗಿ, ಒಂದು ಕೆ.ಜಿ. ಸಕ್ಕರೆ, ಒಂದು ಕೆ.ಜಿ. ತಾಳೆ ಎಣ್ಣೆ, ಒಂದು ಕೆ.ಜಿ. ಉಪ್ಪು ಮತ್ತು 5 ಲೀಟರ್ ಸೀಮೆ ಎಣ್ಣೆ ರಿಯಾಯಿತಿ ದರದಲ್ಲಿ ಒದಗಿಸಲಾಗುತ್ತಿದೆ.

ಬಿಪಿಎಲ್ ಕುಟುಂಬದ ಪ್ರತಿ ಯುನಿಟ್‌ಗೆ 5 ಕೆ.ಜಿ. ಆಹಾರ ಧಾನ್ಯ ಉಚಿತವಾಗಿ, ಒಂದು ಕೆ.ಜಿ. ಸಕ್ಕರೆ, ಒಂದು ಕೆ.ಜಿ. ತಾಳೆ ಎಣ್ಣೆ, ಒಂದು ಕೆ.ಜಿ. ಉಪ್ಪು ಮತ್ತು 5 ಲೀಟರ್ ಸೀಮೆ ಎಣ್ಣೆ ರಿಯಾಯಿತಿ ದರದಲ್ಲಿ ಒದಗಿಸಲಾಗುತ್ತಿದೆ.



ಎಪಿಎಲ್ ಪಡಿತರದಾರರ ಒಂದು ಸದಸ್ಯ ಕುಟುಂಬಕ್ಕೆ 5 ಕೆ.ಜಿ. ಆಹಾರ ಧಾನ್ಯವನ್ನು (3 ಕೆ.ಜಿ. ಅಕ್ಕಿ, 2 ಕೆ.ಜಿ. ಗೋಧಿ) ಹಾಗೂ ಒಂದಕ್ಕಿಂತ ಹೆಚ್ಚು ಸದಸ್ಯರಿರುವ ಎಪಿಎಲ್ ಕುಟುಂಬಗಳಿಗೆ 10 ಕೆ.ಜಿ.ಆಹಾರ ಧಾನ್ಯವನ್ನು (5 ಕೆ.ಜಿ ಅಕ್ಕಿ, 5 ಕೆ.ಜಿ.ಗೋಧಿ) ಪ್ರತಿ ಕೆ.ಜಿ ಅಕ್ಕಿಗೆ ರೂ.15/–ರ ದರದಲ್ಲಿ ಹಾಗೂ ಪ್ರತಿ ಕೆ.ಜಿ.ಗೋಧಿ ರೂ.10/–ರ ದರದಲ್ಲಿ ವಿತರಿಸಲಾಗುತ್ತದೆ. ಎಪಿಎಲ್ ಕುಟುಂಬದ ಕಾರ್ಡ್‌ದಾರರು ಪಡಿತರವನ್ನು ಪಡೆಯಲು ನೊಂದಣಿ ಮಾಡಿದ್ದಲ್ಲಿ ಮಾತ್ರ ಅರ್ಹರಿರುತ್ತಾರೆ. ಗ್ಯಾಸ್ ರಹಿತ ಎಪಿಎಲ್ ಕುಟುಂಬಗಳಿಗೆ 2 ಲೀಟರ್. ಸೀಮೆ ಎಣ್ಣೆಯನ್ನು ಸಹ ವಿತರಿಸಿ, ಆಹಾರ ಭದ್ರತೆಯನ್ನು ಒದಗಿಸುವ ಯೋಜನೆಯಾಗಿರುತ್ತದೆ.

ಕರ್ನಾಟಕ ರಾಜ್ಯವನ್ನು ಹಸಿವು ಮುಕ್ತ ರಾಜ್ಯವನ್ನಾಗಿಸುವ ಹಾಗೂ ಅಹಾರ ಭದ್ರತೆಯನ್ನು ಒದಗಿಸುವುದು ಈ ಯೋಜನೆಯ ಪ್ರಮುಕ ಉದ್ದೇಶವಾಗಿರುತ್ತದೆ.

ರಾಜ್ಯದ ಎಲ್ಲಾ 748 ಹೋಬಳಿಗಳಲ್ಲಿ ಒಂದು ಹೋಬಳಿಯಲ್ಲಿ ಒಂದು ಪಡಿತರ ಅಂಗಡಿಯಂತೆ 748 ಪಡಿತರ ಅಂಗಡಿಗಳಲ್ಲಿ ಒಂದು ಪಡಿತರ ಅಂಗಡಿಯಲ್ಲಿ 3 ಎಎವೈ ಮತ್ತು 3 ಬಿಪಿಎಲ್ ಫಲಾನುಭವಿಗಳಂತೆ ರ್‍ಯಾಂಡಂಆಗಿ ಆಯ್ಕೆಯಾದ ಪಡಿತರ ಅಂಗಡಿಯಿಂದ ಮಾಹಿತಿ ಕಲೆಹಾಕಿ ಸಮೀಕ್ಷೆ ಕೈಗೊಳ್ಳಲಾಗಿದೆ.

- ಸಮೀಕ್ಷೆ ಕೈಗೊಂಡ ಕುಟುಂಬಗಳು : 4488
- ಎಎವೈ ಕುಟುಂಬಗಳು : 2232
- ಬಿಪಿಎಲ್ ಕುಟುಂಬಗಳು : 2256

**ಪ್ರಮುಖ ಅಂಶಗಳು**

## ಎಎವೈ:

- ಅಕ್ಕಿಯನ್ನು ನಿಗದಿ ಪಡಿಸಿರುವಂತೆ ಪಡೆದಿರುವ ಕುಟುಂಬಗಳು **43%** (2232ರ ಪೈಕಿ 960)
- ಅಕ್ಕಿಯನ್ನು ನಿಗದಿ ಪಡಿಸಿರುವುದಕ್ಕಿಂತ ಹೆಚ್ಚು ಪಡೆದಿರುವ ಕುಟುಂಬಗಳು **50%** (2232ರ ಪೈಕಿ 1105)
- ಅಕ್ಕಿಯನ್ನು ನಿಗದಿ ಪಡಿಸಿರುವುದಕ್ಕಿಂತ ಕಡಿಮೆ ಪಡೆದಿರುವ ಕುಟುಂಬಗಳು **7%** (2232ರ ಪೈಕಿ 167)
- **ಸಕ್ಕರೆ, ತಾಳೆ ಎಣ್ಣೆ ಮತ್ತು ಉಪ್ಪನ್ನು** ಪಡೆದಿರುವ ಕುಟುಂಬಗಳು **100%** (ಎಲ್ಲಾ 2232)
- ಸೀಮೆ ಎಣ್ಣೆಯನ್ನು ನಿಗದಿ ಪಡಿಸಿರುವಂತೆ ಪಡೆದಿರುವ ಕುಟುಂಬಗಳು **88%** (2232ರ ಪೈಕಿ 1979)
- ನೀಡುತ್ತಿರುವ ಆಹಾರ ಧಾನ್ಯಗಳು ಒಂದು ತಿಂಗಳಿಗೆ ಸಾಕಾಗುವುದಿಲ್ಲವೆಂದು ತಿಳಿಸಿರುವ ಕುಟುಂಬಗಳು **50%** (2232ರ ಪೈಕಿ 1107)



## ಬಿಪಿಎಲ್:

- ಅಕ್ಕಿಯನ್ನು ನಿಗದಿ ಪಡಿಸಿರುವಂತೆ ಪಡೆದಿರುವ ಕುಟುಂಬಗಳು **99.8%** (2256ರ ಪೈಕಿ 2252)
- ಅಕ್ಕಿಯನ್ನು ನಿಗದಿ ಪಡಿಸಿರುವುದಕ್ಕಿಂತ ಕಡಿಮೆ ಪಡೆದಿರುವ ಕುಟುಂಬಗಳು **0.2%** (2256ರ ಪೈಕಿ 4)
- **ಸಕ್ಕರೆ, ತಾಳೆ ಎಣ್ಣೆ ಮತ್ತು ಉಪ್ಪನ್ನು** ಪಡೆದಿರುವ ಕುಟುಂಬಗಳು **100%** (ಎಲ್ಲಾ 2256)
- ಸೀಮೆ ಎಣ್ಣೆಯನ್ನು ನಿಗದಿ ಪಡಿಸಿರುವಂತೆ ಪಡೆದಿರುವ ಕುಟುಂಬಗಳು **83%** (2256ರ ಪೈಕಿ 1871)
- ನೀಡುತ್ತಿರುವ ಆಹಾರ ಧಾನ್ಯಗಳು ಒಂದು ತಿಂಗಳಿಗೆ ಸಾಕಾಗುವುದಿಲ್ಲವೆಂದು ತಿಳಿಸಿರುವ ಕುಟುಂಬಗಳು **73%** (2256ರ ಪೈಕಿ 1638)
- **1 ರಿಂದ 10 ಕೆ.ಜಿ. ಯಷ್ಟು ಆಹಾರ** ಪದಾರ್ಥಗಳನ್ನು ಹೆಚ್ಚುವರಿಯಾಗಿ ಬಯಸಿರುವ ಕುಟುಂಬಗಳು **45%** (1638ರ ಪೈಕಿ 733)

- **ಪಡಿತರ ಅಂಗಡಿಯಿಂದ ಆಹಾರ ಸಾಮಾಗ್ರಿಗಳನ್ನು ಕಳೆದ ಮೂರು ತಿಂಗಳುಗಳಿಂದ ಪಡೆಯದಿರುವ ಕುಟುಂಬಗಳ ವಿವರ:**
  - ಸಮೀಕ್ಷಿಸಿದ ಕುಟುಂಬಗಳ ಸಂಖ್ಯೆ – 751

**ಕಾರಣಗಳು**

- ಗ್ರಾಮದಲ್ಲಿ ವಾಸವಿಲ್ಲ– **25%** (751 ಕುಟುಂಬಗಳ ಪೈಕಿ 189)
- ಆಹಾರ ಧಾನ್ಯದ ವಿತರಣೆ ದಿನಾಂಕ ತಿಳಿದಿಲ್ಲ – **10%** (751 ಕುಟುಂಬಗಳ ಪೈಕಿ 72)
- ಅಹಾರಧಾನ್ಯ ಅಗತ್ಯವಿಲ್ಲ – **7%** (751 ಕುಟುಂಬಗಳ ಪೈಕಿ 52)
- ವಿತರಣೆಯಾಗುವ ಆಹಾರ ಧಾನ್ಯಗಳ ಗುಣಮಟ್ಟ ಕಳಪೆ – **6%** (751 ಕುಟುಂಬಗಳ ಪೈಕಿ 44)
- ನ್ಯಾಯಬೆಲೆ ಅಂಗಡಿಯ ಮಾಲೀಕರಿಂದ ಸಾಮಾಜಿಕ ನಿಂದನೆ – **5%** (751 ಕುಟುಂಬಗಳ ಪೈಕಿ 39)
- ನ್ಯಾಯಬೆಲೆ ಅಂಗಡಿ ದೂರವಿದೆ – **4%** (751 ಕುಟುಂಬಗಳ ಪೈಕಿ 29)
- ಇತರೆ ಕಾರಣ – **43%** (751 ಕುಟುಂಬಗಳ ಪೈಕಿ 326)



# ಕೃಷಿ ಭಾಗ್ಯ

[ಉಲ್ಲೇಖಿತ ವರ್ಷ 2014–15]

ಕೃಷಿ ಭಾಗ್ಯ ಯೋಜನೆಯು ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಮಳೆ ಆಧಾರಿತ ಕೃಷಿ ಪ್ರದೇಶದಲ್ಲಿ ಮಳೆ ನೀರನ್ನು ಸಂಗ್ರಹಿಸಿ ಮಳೆ ಬಾರದಿದ್ದಾಗ ಸಂಗ್ರಹಿಸಿದ ನೀರನ್ನು ಉಪಯೋಗಿಸಿ ಬೆಳೆಯನ್ನು ಬೆಳೆಯುವ ಉದ್ದೇಶ ಹೊಂದಿರುತ್ತದೆ. ಒಣಭೂಮಿಯಲ್ಲಿ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಿ ರೈತರ ಜೀವನೋಪಾಯವನ್ನು ವೃದ್ಧಿಸುವ ಉದ್ದೇಶದಿಂದ ಹಲವಾರು ಸವಲತ್ತುಗಳನ್ನು ಈ ಯೋಜನೆಯಡಿ ರೈತರಿಗೆ ಒದಗಿಸಲಾಗುತ್ತಿದೆ.

ಕೃಷಿ ಹೊಂಡ ಘಟಕಗಳ ಮೂಲಕ ಮಳೆನೀರಿನ ಸಂರಕ್ಷಣೆ ಹಾಗೂ ಉಪಯುಕ್ತ ಬಳಕೆ, ಲಾಭದಾಯಕ ಬೆಳೆ ಪದ್ಧತಿಗಳ ಅಳವಡಿಕೆ, ಉತ್ತಮ ಆದಾಯ ತರುವ ತೋಟಗಾರಿಕೆ ಬೆಳೆಗಳು, ಪಶುಸಂಗೋಪನಾ ಚಟುವಟಿಕೆಗಳು ಇತ್ಯಾದಿಗಳಿಗೆ ಪ್ರೋತ್ಸಾಹ ನೀಡುವುದರ ಮೂಲಕ ಕೃಷಿಯಲ್ಲಿ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶ ಹೊಂದಲಾಗಿದೆ.

ಕೃಷಿ ಭಾಗ್ಯ ಯೋಜನೆಯನ್ನು ಮೊದಲ ಹಂತದಲ್ಲಿ 5 ಮುಖ್ಯ ಒಣ ಭೂಮಿ ವಲಯಗಳ ರಾಜ್ಯದ 23 ಜಿಲ್ಲೆಗಳ 107 ತಾಲ್ಲೂಕುಗಳಲ್ಲಿ ಜಾರಿಗೆ ತರಲಾಯಿತು. ಪ್ರಸ್ತುತ ರಾಜ್ಯದ 25 ಜಿಲ್ಲೆಗಳ 129 ತಾಲ್ಲೂಕುಗಳಿಗೆ ವಿಸ್ತರಿಸಲಾಗಿದೆ. 23 ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನಗೊಂಡಿರುವ 450 ಹೋಬಳಿಗಳಲ್ಲಿ ಕೃಷಿ ಹೊಂಡ ನಿರ್ಮಿಸಿಕೊಂಡ ಒಂದು ತಾಲ್ಲೂಕಿಗೆ ಕನಿಷ್ಠ 5 ರಂತೆ ಒಟ್ಟು 1373 ಫಲಾನುಭವಿಗಳಿಂದ ಕ್ಷೇತ್ರ ಕಾರ್ಯಾಚರಣೆ ನಡೆಸಿ ಮಾಹಿತಿಯನ್ನು ಸಂಗ್ರಹಿಸಲಾಗಿರುತ್ತದೆ.



**ಪ್ರಮುಖ ಅಂಶಗಳು:**

- **100%** ರಷ್ಟು ಆಯ್ಕೆ ಮಾಡಿರುವ ಸ್ಥಳಗಳಲ್ಲಿ ಸಮೀಕ್ಷಿಸಿದ ಕೃಷಿ ಹೊಂಡಗಳು ಅಸ್ಥಿತ್ವದಲ್ಲಿರುತ್ತವೆ. (1373 ಕೃಷಿ ಹೊಂಡಗಳನ್ನು ಪರಿಶೀಲಿಸಲಾಗಿದೆ)
- **97%** ರಷ್ಟು ರೈತರು ಕೃಷಿ ಹೊಂಡ ಘಟಕವನ್ನು ನಿಗದಿ ಪಡಿಸಿರುವ ಅವಧಿಯೊಳಗೆ ಪೂರ್ಣಗೊಳಿಸಿರುತ್ತಾರೆ. (1373 ರೈತರ ಪೈಕಿ 1332 ರೈತರು)
- **87%** ರಷ್ಟು ರೈತರು ಕೃಷಿ ಹೊಂಡ ಘಟಕವನ್ನು ನಿಗದಿ ಪಡಿಸಿರುವ ದರಕ್ಕಿಂತ ಹೆಚ್ಚಿನ ವೆಚ್ಚ ಭರಿಸಿ ನಿರ್ಮಿಸಿಕೊಂಡಿರುತ್ತಾರೆ. (1373 ರೈತರ ಪೈಕಿ 1189 ರೈತರು)




- **95%** ರಷ್ಟು ಕೃಷಿ ಹೊಂಡಗಳಲ್ಲಿ ಘಟಕ ನಿರ್ಮಿಸಿದ ನಂತರ ಒಂದು ಮತ್ತು ಒಂದಕ್ಕಿಂತ ಹೆಚ್ಚು ಬಾರಿ ನೀರು ತುಂಬಿರುತ್ತದೆ. (1373ರ ಪೈಕಿ 1310)





- **8%** ರಷ್ಟು ಕೃಷಿ ಹೊಂಡ ಘಟಕವನ್ನು ಭೂ ಭಾಗದ ಎತ್ತರ ಪ್ರದೇಶದಲ್ಲಿ ನಿರ್ಮಿಸಲಾಗಿದೆ. (1373ರ ಪೈಕಿ 111)
- ಕೃಷಿ ಹೊಂಡ ಘಟಕ ನಿರ್ಮಿಸಿದ ನಂತರ ಹೆಚ್ಚುವರಿ ಬೆಳೆಯನ್ನು ಬೆಳೆದ ರೈತರು – **62%** (1373ರ ಪೈಕಿ 856)



- ಕೃಷಿ ಹೊಂಡ ಘಟಕ ನಿರ್ಮಿಸಿದ ನಂತರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ ಎಂದು ತಿಳಿಸಿರುವ ರೈತರು – **72%** (1373ರ ಪೈಕಿ 993)




- **ರೈತರ ಭೂ ಹಿಡುವಳಿಯ ಪ್ರಮಾಣ**
    - 20 ಗುಂಟೆಯಿಂದ 2 ಎಕರೆಯವರೆಗೆ ಭೂಮಿ ಹೊಂದಿರುವ ರೈತರು – **77%** (1373ರ ಪೈಕಿ 1055)
    - 2 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವ ರೈತರು – **23%** (1373ರ ಪೈಕಿ 318)



# ರಿಯಾಯಿತಿ ಬಡ್ಡಿ ದರದ ಸಾಲ

[ಉಲ್ಲೇಖಿತ ವರ್ಷ 2014–15]

ರಾಜ್ಯದ ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳಿಂದ ಅಂದರೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಲ್ಯಾಂಪ್ ಸಹಕಾರ ಸಂಘಗಳು, ಟಿಬೇಟಿಯನ್ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕುಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳು ರಿಯಾಯಿತಿ ಬಡ್ಡಿದರದಲ್ಲಿ ಅಲ್ಪಾವಧಿ, ಮದ್ಯಮಾವಧಿ ಮತ್ತು ದೀರ್ಘಾವಧಿ ಸಾಲವನ್ನು ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳನ್ನು ಕೈಗೊಳ್ಳಲು ರೈತರಿಗೆ ನೀಡಲಾಗುತ್ತಿದೆ. ಇದು, 3 ಲಕ್ಷ ರೂ ವರೆಗಿನ ಅಲ್ಪಾವಧಿ ಕೃಷಿ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ಹಾಗೂ 10 ಲಕ್ಷ ರೂ ವರೆಗಿನ ಮದ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ಶೇಕಡಾ 3ರ ಬಡ್ಡಿ ದರದಲ್ಲಿ ನೀಡುವ ಯೋಜನೆಯಾಗಿರುತ್ತದೆ.

ಯೋಜನೆಯು ಅನುಷ್ಠಾನಗೊಂಡಿರುವ ಹೋಬಳಿಗಳಲ್ಲಿ (ಅಲ್ಪಾವಧಿ, ಮದ್ಯಮಾವಧಿ ಮತ್ತು ದೀರ್ಘಾವಧಿ) ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಪಡೆದ ಫಲಾನುಭವಿಗಳನ್ನು ಅನಿಯತವಾಗಿ ಪ್ರತಿ ಹೋಬಳಿಗೆ 3 ಫಲಾನುಭವಿಗಳಂತೆ ಅಥವಾ ತಾಲ್ಲೂಕಿಗೆ ಕನಿಷ್ಠ 5 ಫಲಾನುಭವಿಗಳಂತೆ ಒಟ್ಟು 2335 ಫಲಾನುಭವಿಗಳು ಆಯ್ಕೆ ಮಾಡಿ ತ್ವರಿತ ಮಾದರಿ ಸಮೀಕ್ಷೆ ಮಾಡಲಾಗಿರುತ್ತದೆ.



## ಪ್ರಮುಖ ಅಂಶಗಳು

### ಒಟ್ಟು ನೀಡಲಾದ ಸಾಲದಲ್ಲಿ ವಿವಿಧ ಸಹಕಾರ ಸಂಘಗಳ ಪಾಲಿನ ಪ್ರಮಾಣ

- **82.87%** ರಷ್ಟು ರೈತರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಸಾಲ ಪಡೆದಿರುತ್ತಾರೆ. (2335 ರೈತರ ಪೈಕಿ 1935 ರೈತರು)
- **13.62%** ರಷ್ಟು ರೈತರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಿಂದ ಸಾಲ ಪಡೆದಿರುತ್ತಾರೆ. (2335 ರೈತರ ಪೈಕಿ 318 ರೈತರು)
- **1.71%** ರಷ್ಟು ರೈತರು ಇತರೆ ಸಂಸ್ಥೆ/ಬ್ಯಾಂಕ್‌ಗಳಿಂದ ಸಾಲ ಪಡೆದಿರುತ್ತಾರೆ. (2335 ರೈತರ ಪೈಕಿ 40 ರೈತರು)
- **1.67%** ರಷ್ಟು ರೈತರು ಪಿಕಾರ್ಡ್ ಬ್ಯಾಂಕ್‌ನಿಂದ ಸಾಲ ಪಡೆದಿರುತ್ತಾರೆ. (2335 ರೈತರ ಪೈಕಿ 39 ರೈತರು)
- **0.13%** ರಷ್ಟು ರೈತರು ಲ್ಯಾಂಪ್ ಸಹಕಾರ ಸಂಘದಿಂದ ಸಾಲ ಪಡೆದಿರುತ್ತಾರೆ. (2335 ರೈತರ ಪೈಕಿ 3 ರೈತರು)




## ಪಡೆದ ಸಾಲದ ಅವಧಿ

- **86%** ರಷ್ಟು ರೈತರು ಕೃಷಿ ಸಂಬಂಧ ಅಲ್ಪಾವಧಿ ಸಾಲ ಪಡೆದಿರುತ್ತಾರೆ. (2335 ರೈತರ ಪೈಕಿ 2013 ರೈತರು)
- **9%** ರಷ್ಟು ರೈತರು ಕೃಷಿ ಸಂಬಂಧ ಮದ್ಯಮಾವಧಿ ಸಾಲ ಪಡೆದಿರುತ್ತಾರೆ (2335 ರೈತರ ಪೈಕಿ 201 ರೈತರು)
- **5%** ರಷ್ಟು ರೈತರು ಕೃಷಿ ಸಂಬಂಧ ದೀರ್ಘಾವಧಿ ಸಾಲ ಪಡೆದಿರುತ್ತಾರೆ. (2335 ರೈತರ ಪೈಕಿ 121 ರೈತರು)



**ಪಡೆದ ಸಾಲದ ಮೊತ್ತ:**

- ಕೃಷಿ ಸಂಬಂಧ ಪಡೆದ ಅಲ್ಪಾವಧಿ ಸಾಲದ ಸರಾಸರಿ ಮೊತ್ತ ರೂ. 72,479/–, ಅಲ್ಪಾವಧಿ ಸಾಲ ಪಡೆದ ಒಟ್ಟು ಮೊತ್ತ ರೂ. 14.59 ಕೋಟಿಗಳು.
- ಕೃಷಿ ಸಂಬಂಧ ಪಡೆದ ಮಧ್ಯಮಾವಧಿ ಸಾಲದ ಸರಾಸರಿ ಮೊತ್ತ ರೂ. 2,68,657/–, ಮಧ್ಯಮಾವದಿ ಸಾಲ ಪಡೆದ ಒಟ್ಟು ಮೊತ್ತ ರೂ. 5.40 ಕೋಟಿಗಳು.
- ಕೃಷಿ ಸಂಬಂಧ ಪಡೆದ ಧೀರ್ಘಾವಧಿ ಸಾಲದ ಸರಾಸರಿ ಮೊತ್ತ ರೂ. 3,39,669/–, ಧೀರ್ಘಾವಧಿ ಸಾಲ ಪಡೆದ ಒಟ್ಟು ಮೊತ್ತ ರೂ. 4.11 ಕೋಟಿಗಳು.
- ಒಟ್ಟು ಪಡೆದ ಸರಾಸರಿ ಮೊತ್ತ ರೂ. 1,07,398/–, ಒಟ್ಟು ಪಡೆದ ಸಾಲದ ಮೊತ್ತ ರೂ. 24.10 ಕೋಟಿಗಳು.




**ಸಾಲದ ಬಳಕೆ**

- **100%** ರಷ್ಟು ರೈತರು ಪಡೆದ ಸಾಲವನ್ನು ಕೃಷಿ ಉದ್ದೇಶಕ್ಕೆ ಬಳಕೆ ಮಾಡಿರುತ್ತಾರೆ. (2335)
- **90%** ರಷ್ಟು ರೈತರು ಕೃಷಿ ಸಾಲವನ್ನು ಪಡೆದ ನಂತರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ ಎಂದಿರುತ್ತಾರೆ. (2335 ರೈತರ ಪೈಕಿ 2100ರೈತರು)
- **94%** ರಷ್ಟು ರೈತರು ಪಡೆದ ಕೃಷಿ ಸಾಲವನ್ನು ಮರು ಪಾವತಿಸುತ್ತಿದ್ದಾರೆ. (2335 ರೈತರ ಪೈಕಿ 2202 ರೈತರು)
- **6%** ರಷ್ಟು ರೈತರು ಪಡೆದ ಕೃಷಿ ಸಾಲವನ್ನು ಮರು ಪಾವತಿಸುತ್ತಿಲ್ಲ. (2335 ರೈತರ ಪೈಕಿ 133 ರೈತರು)

**ಸಾಲ ಮರುಪಾವತಿಸದಿರುವುದಕ್ಕೆ ಕಾರಣಗಳು:**

- ಅನಾವೃಷ್ಟಿ ಹಾಗೂ ರೋಗಬಾಧೆಯಿಂದ ಬೆಳೆ ನಾಶ.
- ಅಸಮರ್ಪಕ ಹಾಗೂ ಅನಿಗದಿತ ವಿದ್ಯುಚ್ಛಕ್ತಿ ಪೂರೈಕೆ.
- ಭತ್ತ, ಕಬ್ಬು, ಬಾಳೆ ಮತ್ತು ರೇಷ್ಮೆ ಬೆಲೆ ಕುಸಿತ,